‘ವಿಸ್ಮೃತಿ’ ಎಂಬ ಪರಿಕಲ್ಪನೆ ಭಾರತವನ್ನು ಪಶ್ಚಿಮದ ಗೃಹೀತಗಳಿಂದ ಕಳಚಿ ಶೋಧಿಸುವ ಯೋಜನೆಯಾಗಿತ್ತು. ಆದರೆ, ಡಿಆರ್ ಅವರ ಕಲ್ಪನೆ, ಸೈಯಿದ್ ಮತ್ತು ದೇವಿಯವರ ಕನ್ನಡ ಅನುವಾದವಾಗಿರಲಿಲ್ಲ. ಬದಲಾಗಿ ಕನ್ನಡದ ನೆಲೆಗಟ್ಟಿನಲ್ಲಿ ನಿಂತು ಲೋಕವನ್ನು ಅರ್ಥೈಸುವ ದೃಷ್ಟಿ ಮತ್ತು ವಸಾಹತುಶಾಹಿ ವ್ಯವಸ್ಥೆಯ ಗ್ರಹಿಕೆಗಳು ಉಂಟು ಮಾಡಿದ ಅನಾಹುತಗಳ ಅರಿವಿನಿಂದ ಹೊರಹೊಮ್ಮಿದ ಪರಿಕಲ್ಪನೆಯಾಗಿತ್ತು. ‘ಲಂಕೇಶ್ ಪತ್ರಿಕೆ’ಗಾಗಿ ನಟರಾಜ್ ಹುಳಿಯಾರ್ ಮಾಡಿದ ಸಂದರ್ಶನವೊಂದರಲ್ಲಿ ಡಿಆರ್ ಅವರೇ ವಿವರಿಸುವಂತೆ, ‘ವಸಾಹತುಶಾಹಿ ತಂದ ವಿಸ್ಮೃತಿಯ ಸ್ವರೂಪ ಏನಂದ್ರೆ ಬ್ರಾಹ್ಮಣೇತರ ಜಾತಿಗಳಿಗೆ, ಅವೈದಿಕ ಜನಾಂಗಗಳಿಗೆ ದೀರ್ಘ ಸಾಂಸ್ಕೃತಿಕ ಸ್ಮೃತಿ ಇಲ್ಲ ಎಂಬ ಭಾವನೆಯನ್ನು ಪ್ರತಿಷ್ಠಾಪಿಸುವುದು. ಆದ್ದರಿಂದ ಅವೈದಿಕ ಜೀವನ ದರ್ಶನಗಳ ಸಾಂಸ್ಕೃತಿಕ ಸ್ಮೃತಿಗಳನ್ನು ಗಳಿಸಿಕೊಳ್ಳೋದು, ಆಧುನಿಕ ಮೌಲ್ಯಗಳಿಂದ ಪರಿಷ್ಕರಿಸೋದು ವಿಸ್ಮೃತಿ ಕಲ್ಪನೆಯ ಗುರಿ.’



ಇದನ್ನು ಸೂತ್ರೀಕರಿಸುವುದರಲ್ಲಿ ಸಮಸ್ಯೆಯೇನೊ ಇರಬಹುದು. ಆದರೆ ಈ ಪರಿಕಲ್ಪನೆಯೇ ಡಿಆರ್ ಅವರ ಬಹುಮುಖ್ಯ ಬೌದ್ಧಿಕ ಕೊಡುಗೆಗಳಲ್ಲಿ ಒಂದು. ಇದರ ಪರಿಣಾಮದಿಂದ ಕನ್ನಡದ ಚಿಂತನಶೀಲ ಪರಂಪರೆಗೆ ಹೊಸ ತಿರುವು ಸಿಕ್ಕು, ಮುಂದೆ ಬಂದ ಅಧ್ಯಯನಕಾರರ ದಿಕ್ಕು ಬದಲಾಯಿಸುವಂತಾಯಿತು. ಉದಾಹರಣೆಗೆ, ರಹಮತ್ ತರೀಕೆರೆ ಮತ್ತು ನಟರಾಜ ಬೂದಾಳು ಅಂತಹವರ ಚಿಂತನೆಗಳನ್ನು ಗಮನಿಸಬಹುದು.

‘ವಿಸ್ಮೃತಿ’ ಯೋಜನೆಯ ಭಾಗವಾಗಿಯೇ ‘ಅಕ್ಷರ ಚಿಂತನ’ ಮಾಲೆಯಡಿಯಲ್ಲಿ ಡಿಆರ್ ಹಲವು ಪುಸ್ತಕಗಳನ್ನು ಸಂಪಾದಿಸಿದರು. ಬೌದ್ಧ ದಾರ್ಶನಿಕ ನಾಗಾರ್ಜುನನಿಂದ ಹಿಡಿದು ಆಧುನಿಕ ಚಿಂತಕ ಆಶೀಶ್ ನಂದಿಯವರ ವಿಚಾರಗಳನ್ನು; ಕುಮಾರಿಲ ಭಟ್ಟನಿಂದ ಹಿಡಿದು ಆನಂದ ಕುಮಾರ ಸ್ವಾಮಿಯವರಂತಹ ವಿಚಾರಗಳನ್ನು ಕನ್ನಡದಲ್ಲಿ ಬೇರೆ ಬೇರೆಯವರು ಅನುವಾದಿಸಿ ಪರಿಚಯಿಸುವ ಸುಮಾರು 16 ಪುಸ್ತಕಗಳನ್ನು ಈ ಮಾಲಿಕೆಯಲ್ಲಿ ಪ್ರಕಟಿಸಲಾಯಿತು. ಅವುಗಳಲ್ಲಿ ಹಲವಕ್ಕೆ ಡಿಆರ್ ವಿವರಣಾತ್ಮಕ ಟಿಪ್ಪಣಿಗಳನ್ನು ಬರೆದರು. (ಅವರು ತೀರಿಕೊಂಡ ನಂತರ ಈ ಮಾಲೆಗೆ ‘ಡಿ.ಆರ್. ನಾಗರಾಜ್ ನೆನಪಿನ ಅಕ್ಷರ ಚಿಂತನ ಮಾಲೆ’ ಎಂದು ಹೆಸರಿಡಲಾಯಿತು.)

ಡಿಆರ್ ಅವರ ಮೊದಲ ವಿಮರ್ಶಾ ಸಂಕಲನ ‘ಅಮೃತ ಮತ್ತು ಗರುಡ’ ಪ್ರಕಟಗೊಂಡಾಗ ಅವರಿಗೆ ಇಪ್ಪತ್ತೈದು ವರ್ಷ; ಕನ್ನಡ ವಿಮರ್ಶಾ ಪರಂಪರೆಗೆ ಇನ್ನೂ ನೂರು ವರುಷ ತುಂಬಿರಲಿಲ್ಲ. ನವೋದಯ ಕಾಲದಲ್ಲಿ ವಿಮರ್ಶೆ ಬರೆದವರು ಹೆಚ್ಚಾಗಿ ಸೃಜನಶೀಲ ಲೇಖಕರು ಮತ್ತು ವಿದ್ವಾಂಸರಾಗಿದ್ದರು. ಈ ಪೂರ್ವ ಸೂರಿಗಳ ನಂತರ ಕೀರ್ತಿನಾಥ ಕುರ್ತಕೋಟಿ (1928–2003) ಅವರು ಕನ್ನಡದ ಪ್ರಾತಿನಿಧಿಕ ವಿಮರ್ಶಕರಾಗಿ ಹೊರಹೊಮ್ಮಿದರು. ಮುಂದೆ ಬಂದ ಹಲವು ವಿಮರ್ಶಕರು ಕನ್ನಡದ ಈ ಪರಂಪರೆಯನ್ನು ಹದಗೊಳಿಸಿದ್ದು ನಿಜ. ಆದರೆ ಡಿಆರ್ ಅವರು ಈ ಹಾದಿಗೆ ಅಪ್ರತಿಮ ತಿರುವನ್ನು ಕೊಟ್ಟರು. ಅವರ ವಿಮರ್ಶಾ ಮಾರ್ಗದ ವಿಶಿಷ್ಟತೆಯೆಂದರೆ, ಅತಿ ಕಡಿಮೆ ಅವಧಿಯಲ್ಲಿ ಅದು ಕಂಡುಕೊಂಡ ಪಲ್ಲಟಗಳು ಮತ್ತು ಸಾಧಿಸಿದ ಬೌದ್ಧಿಕ ಜಿಗಿತಗಳು. ಅಂತರ್‌ಶಿಸ್ತೀಯ ಅಧ್ಯಯನದ ಆಯಾಮವನ್ನು ಸೇರಿಸುವುದರ ಮೂಲಕ, ಕನ್ನಡ ವಿಮರ್ಶೆಗೆ ಹೊಸ ಪರಿಭಾಷೆಯನ್ನು ಅವರು ಕಟ್ಟಿಕೊಟ್ಟರು, ಹೊಸ ದಿಕ್ಕುಗಳನ್ನು ತೋರಿಸಿದರು.

ಕೊಂಚ ವಿವರಿಸುವುದಾದರೆ: ಮಾರ್ಕ್ಸ್‌ವಾದದಿಂದ ವಸಾಹತೋತ್ತರವಾದ, ದಲಿತ- ಬಂಡಾಯ ಸಾಹಿತ್ಯದ ರಾಜಕಾರಣದಿಂದ ವಿಸ್ಮೃತಿ ಚಿಂತನೆಯತ್ತ, ಶಿಷ್ಟ ಸಾಹಿತ್ಯದಿಂದ ಜನಪ್ರಿಯ ಮತ್ತು ಜಾನಪದ ಲೋಕಗಳ ಅನ್ವೇಷಣೆ, ಪಾಶ್ಚಾತ್ಯವಾದಗಳಿಂದ